ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ಸೋಮವಾರ, ದಿನಾಂಕ: 23ನೇ ಮಾರ್ಚ್, 2020

ಪದವಿ ಪೂರ್ವ ಶಿಕ್ಷಣ ಉಪನ್ಯಾಸಕರು ಬಿ.ಎಡ್ ಪದವಿ ಹೊಂದುವವರ ಕುರಿತು

ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :-

1470 (1765) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಬಿ.ಎಡ್ ಪದವಿ ಹೊಂದಿರದ ಶಿಕ್ಷಕರ ಸಂಖ್ಯೆ ಎಷ್ಟು ; ಉಪನ್ಯಾಸಕರಾಗಲು ಬಿ.ಎಡ್, ಪದವಿ ಕಡ್ಡಾಯವಾಗಿದೆಯೇ ;

(ಆ) ವಿಶೇಷ ವಿಲೀನ ನಿಯಮಗಳ ಪ್ರಕಾರ ಕೇವಲ ಸ್ನಾತಕೋತ್ತರ ಪದವಿ ಹೊಂದಿದವರನ್ನು ಉಪನ್ಯಾಸಕರನ್ನಾಗಿ ನೇಮಿಸುವುದರಿಂದ ಉಪನ್ಯಾಸಕ ಹುದ್ದೆಗೆ ಅನರ್ಹರನ್ನು ನೇಮಿಸಿದಂತಾಗಿಲ್ಲವೇ; ಇಲ್ಲವೆಂದಾದಲ್ಲಿ ಉಪನ್ಯಾಸಕ ಹುದ್ದೆಗೆ ಬಿ.ಎಡ್. ಪದವಿ ಕಡ್ಡಾಯ ಎಂಬುದನ್ನು ತೆರವುಗೊಳಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ;

(ಇ) ವಿಶೇಷ ವಿಲೀನ ನಿಯಮಗಳ ಪ್ರಕಾರ ಕೇವಲ ಸ್ನಾತಕೋತ್ತರ ಪದವಿ ಹೊಂದಿದವರನ್ನು ನೇಮಿಸಿದ್ದು ಅವರಿಗೆ ಬಿ.ಎಡ್ ಪದವಿ ಹೊಂದಲು ಅಸಾಧ್ಯವೆಂದಾದಲ್ಲಿ ಅಂತಹ ವಿಲೀನಗೊಂಡ ಉಪನ್ಯಾಸಕರನ್ನು ಇತರ ಇಲಾಖೆಗಳಲ್ಲಿ ಅರ್ಹ ಹುದ್ದೆಗೆ ವಿಲೀನಗೊಳಿಸುವ ಬಗ್ಗೆ ಸರ್ಕಾರದ ನಿಲುವೇನು ;

(ಈ) ಅನರ್ಹ ಉಪನ್ಯಾಸಕರು ಈಗಾಗಲೆ ವಿಲೀನಗೊಂಡಿರುತ್ತಾರೆ ಎಂಬ ಒಂದೇ ಕಾರಣಕ್ಕೆ ಬಿ.ಎಡ್ ಪದವಿ ಹೊಂದಲು ವಿನಾಯಿತಿ ನೀಡಿದಲ್ಲಿ ಸರ್ಕಾರಿ ಶಾಲೆಗಳ ಶಿಕ್ಷಣ ಗುಣಮಟ್ಟದ ಮೇಲೆ ಪರಿಣಾಮ ಬೀರುವುದಿಲ್ಲವೇ ; ಇದರಿಂದ ವಿದ್ಯಾಭ್ಯಾಸದ ಮೇಲೆ ಆಗುವ ಗುಣಮಟ್ಟದ ಕುಸಿತಕ್ಕೆ ಹೊಣೆಗಾರರು ಯಾರು;

(ಉ) ಕೆಲವೇ ಕೆಲವು ಉಪನ್ಯಾಸಕರ ಹಿತಾಸಕ್ತಿ ಕಾಯಲು ಸರ್ಕಾರಿ ಕಾಲೇಜುಗಳ ವಿದ್ಯಾರ್ಥಿಗಳ ಭವಿಷ್ಯದ ಕುರಿತು ಸರ್ಕಾರ ತೆಗೆದುಕೊಂಡ ಕ್ರಮವೇನು ?